





**ಮೊದಲ ಮಳೆ ಬಿದ್ದ ಬಳಿಕ ಕುದುರೆಮುಖದ ಹಾದಿಯುದ್ದಕ್ಕೂ ಅದ್ಭುತ ದೃಶ್ಯಕಾವ್ಯವೇ ಬಿಚ್ಚಿಕೊಳ್ಳುತ್ತದೆ. ಅದನ್ನು ನೋಡಿಲ್ಲವೆಂದಾದಲ್ಲಿ ನೀವು ದುರದೃಷ್ಟವಂತರೆಂದೇ ಹೇಳಬೇಕು.**

ಚಿತ್ರ– ಲೇಖನ: **ಧರ್ಮಾನಂದ ಶಿರ್ವ**

**ಕು**ದುರೆಮುಖ–ಸಂಸೆ ಮಾರ್ಗ ಪಶ್ಚಿಮ ಘಟ್ಟದ ಒಂದು ಹಾದಿಯ ಬೆಟ್ಟಶ್ರೇಣಿಗಳ ಬಹುಮುಖ ಚೆಲುವು. ಮುಂಜಾನೆ ಉಪಾಹಾರದ ನಂತರ ಕಾರಿನಲ್ಲಿ ಪಯಣ ಶುರುವಾಯಿತು. ಹಿಂದಿನ ರಾತ್ರಿ ಸುರಿದ ಮುಂಗಾರು ಪೂರ್ವ ಮಳೆಯಿಂದಾಗಿ ವಾತಾವರಣ ಹಿತವಾಗಿತ್ತು. ತೆಳ್ಳನೆಯ ಕಪ್ಪು ಮೋಡಗಳು ಆಕಾಶ ತುಂಬ ಜೋತುಬಿದ್ದುದರಿಂದ ಬಿಸಿಲಿನ್ನೂ ಇಣುಕಿರಲಿಲ್ಲ.

ಒದ್ದೆ ರಸ್ತೆಯ ಮೇಲೆ ಓಡುತ್ತಿದ್ದ ಕಾರಿನ ವೇಗವನ್ನು ಬಜಗೋಳಿಯ ನಂತರ ಘಟ್ಟಪ್ರದೇಶದ ಏರು ತಿರುವಿನ ರಸ್ತೆಯಿಂದಾಗಿ ಕಡಿಮೆ ಮಾಡಿದೆ. ಹಾದಿಯುದ್ದಕ್ಕೂ ಜೀರುಂಡೆಗಳ ಏಕತಾನತೆಯ ನಿರಂತರ ಮೊರೆತ ಮಳೆಗಾಲದ ನೆನಪನ್ನು ತರಿಸುತ್ತಿತ್ತು. ಒಂದೆಡೆ ದೂರದಲ್ಲೆಲ್ಲೋ ಕಾಡಿನ ಮಧ್ಯೆ ಭೋರ್ಗರೆಯುವ ತಡಸಲಿನ ಸದ್ದು ಕೇಳಿ ಬರುತ್ತಿತ್ತು. ಸುರಿದ ಗಾಳಿ ಮಳೆಯಿಂದಾಗಿ ಹಾದಿಯಲ್ಲಿ ಮುರಿದುಬಿದ್ದ ಮರದ ರೆಂಬೆ, ಒಣಗಿದ ಕಟ್ಟಿಗೆಗಳಿಂದ ತಪ್ಪಿಸಿಕೊಳ್ಳುತ್ತ ಕಾರು ಓಡಿಸುವಷ್ಟರಲ್ಲಿ ಎಸ್ ಕೆ ಬಾರ್ಡರ್ ಬಂದೇಬಿಟ್ಟಿತು.

ಅಲ್ಲಿಂದ ಮುಂದೆ ಸಂಸೆಯವರೆಗಿನ ಕುದುರೆಮುಖ ಹಾದಿ ಸುತ್ತಲೂ ಹಸಿರು ಹೊತ್ತ ಪರ್ವತ ಪ್ರದೇಶಗಳ ಸುಂದರ ದೃಶ್ಯಕಾವ್ಯ. ಎಡಭಾಗದಲ್ಲಿ ಎತ್ತರವಾಗಿ ಉದ್ದಕ್ಕೂ ಹಬ್ಬಿದ ಬೆಟ್ಟಗಳು ಎಲ್ಲೆಡೆಯಿಂದಲೂ ರಮ್ಯತೆಯ ಹೊಸನೋಟಗಳನ್ನು ನೀಡುತ್ತಿದ್ದವು. ದುರ್ಗಮವಲ್ಲದ ರಸ್ತೆಯುದ್ದಕ್ಕೂ ಕಣ್ಣು ಹಾಯಿಸಿದಲ್ಲೆಲ್ಲ ಹಸಿರ ಸಿರಿ. ಇತ್ತೀಚಿನ ದಿನಗಳಲ್ಲಿ ಸುರಿದ ಮಳೆಯಿಂದಾಗಿ ಹಸಿರಲ್ಲಿ ಉಸಿರು ತುಂಬಿದ ಭಾವ.

ಬೆಟ್ಟಗಳ ತುದಿಗಳನ್ನು ಕಲಾತ್ಮಕವಾಗಿ ನುಣ್ಣಗೆ ಆವರಿಸಿರುವ ಹಸಿರು ಹೊದಿಕೆಗೆ ಇಳಿಜಾರಿನ ಕಣಿವೆಗಳಲ್ಲಿ ಬೆಳೆದು ನಿಂತ ಶೋಲೋ ಕಾಡುಗಳ ಚೌಕಟ್ಟು. ವಿವಿಧ ಕೋನಗಳಲ್ಲಿ ಕಾಣುವ ಶಿಖರಗಳ ಎತ್ತರದ ನಿಲುವಿನ ಪರಿಯಲ್ಲಿ ವಿಭಿನ್ನ ಹಿನ್ನೆಲೆಯ ಚಿತ್ರಣ. ನಮ್ಮೆದುರು ಕಣ್ತುಂಬಲಾರದಷ್ಟು ಚೆಲ್ಲಿದ ಚೆಲುವಿನಲ್ಲಿ ಕಾವ್ಯಭಾವದ ಲಹರಿ. ಪ್ರಕೃತಿ ಅಲ್ಲೆಲ್ಲ ತನ್ನ ಚೆಲುವನ್ನು ಹಾಸಿ ಪವಡಿಸಿದಂತಹ ಅನುಭಾವ.

ಪ್ರಕೃತಿಯೊಳಗೆ ಒಂದಾಗಿ ಸಾಗುತ್ತಿದ್ದಂತೆಯೇ ದಾರಿಮಧ್ಯೆ ಗಕ್ಕನೆ ನಿಂತ ಮೂರು ವಾಹನಗಳಿಂದ ವಾಸ್ತವಕ್ಕೆ ಇಳಿದು ಅಪಘಾತವೇನಾದರೂ ನಡೆಯಿತೇ ಎಂದು ಯೋಚಿಸುವಷ್ಟರಲ್ಲಿ ನಮ್ಮ ಬಲಭಾಗದಲ್ಲಿ ಹಾವಿನ ಹೊಡೆತಕ್ಕೆ ಸಿಕ್ಕ ಉಡವೊಂದು ತೆವಳುತ್ತಾ ಸಾಗಿತ್ತು. ಆಗ ತಾನೆ ಹಾವಿನ ಬಾಯಿಂದ ಅದು ತಪ್ಪಿಸಿಕೊಂಡಿರಬೇಕೆಂದು ಅನಿಸಿದಾಗ ಎಡಭಾಗದಲ್ಲಿ ದಪ್ಪನೆಯ ಕಪ್ಪು ಹಾವೊಂದು ಸರಸರನೆ ಇಳಿಜಾರಲ್ಲಿ ಸರಿದುಹೋಯಿತು. ಒಂದು ಕ್ಷಣ ಮನದಲ್ಲಿ ಭಯ ಸುಳಿದು ಮರೆಯಾಯಿತು. ಪ್ರಕೃತಿಯಲ್ಲಿ ಜೀವ ಬದುಕಿನ ಸರಪಳಿಯ ಸನ್ನಿವೇಶವನ್ನು ಬಹುಶಃ ಮುಂದೆ ಹಾದುಹೋದ ಕಾರಲ್ಲಿದ್ದವರು ಕಂಡಿರಬೇಕು.

ಹಸಿರ ಸೆರಗಲ್ಲಿ ಸಾಗಿದ ನಮ್ಮ ಪಯಣ ರಸ್ತೆಯ ಪಕ್ಕದಲ್ಲಿ ಹುಲುಸಾಗಿ ಬೆಳೆದು ನಿಂತ ಪೇರಲ ಗಿಡಗಳ ಕೆಂಪನೆಯ ಚಿಗುರ ಮೋಡಿಗೆ ಒಂದಿಷ್ಟು ಹೊತ್ತು ನಿಂತಿತು. ಕಷಾಯ ಮತ್ತು ತಂಬುಳಿಗೆ ಹೇಳಿ ಮಾಡಿಸಿದಂತಿರುವ ಚಿಗುರೆಲೆಗಳನ್ನು  ಒಂದಿಷ್ಟು ಕಿತ್ತುಕೊಂಡೆವು. ಅಲ್ಲಿಂದ ಸಂಸೆ ತನಕದ ಹಾದಿಯಲ್ಲಿ ಅಲ್ಲಲ್ಲಿ 'ಬಿಸಿ ಟೀ ಕಾಫಿ ದೊರೆಯುತ್ತದೆ' ಎನ್ನುವ ಫಲಕಗಳನ್ನು ಹೊತ್ತ ಹೋಟೆಲುಗಳು ಕಂಡುಬಂದವು.

ಮುಂದುವರಿದ ನಾವು ಟೀ ಬ್ರೇಕ್‌ಗೆಂದು ಸಂಸೆಯ ಟೀ ಎಸ್ಟೇಟಿನ ತಪ್ಪಲಲ್ಲಿ ಕಾರನ್ನು ನಿಲ್ಲಿಸಿದೆವು. ಅದೊಂದು ಸುಂದರ ತಾಣ. ಬೆಟ್ಟದ ತುಂಬ ಹರಡಿರುವ ಸವರಿ ನಿಂತ ಟೀ ಗಿಡಗಳು. ನಡುವಿನಲ್ಲೊಂದು ಗಣೇಶ ಗುಡಿ. ರಸ್ತೆಯ ಪಕ್ಕದಲ್ಲಿ ಗೋಮನ್‌ಖಾನ್ ಟೀ ಹೌಸ್. ಚಿತ್ರ ಕಲಾವಿದನೊಬ್ಬ ಚಿತ್ರಿಸಿದ ಲ್ಯಾಂಡ್‌ಸ್ಕೇಪ್ ಚಿತ್ರದಂತೆ ಆ ಪರಿಸರ ನೋಡುಗರಿಗೆ ಮುದ ನೀಡುತಿತ್ತು. ಅಲ್ಲಿ ಹೊತ್ತು ಸರಿದದ್ದೇ ಗೊತ್ತಾಗಲಿಲ್ಲ. ಟೀ ಗಾರ್ಡನ್‌ನಲ್ಲಿ ಒಂದಿಷ್ಟು ಅಡ್ಡಾಡಿ, ಫೋಟೋ ಕ್ಲಿಕ್ಕಿಸಿ, ಬಿಸಿ ಟೀ ಕುಡಿದು ನಮ್ಮ ಸವಾರಿ ಮತ್ತೆ ಬೆಂಗಳೂರಿನತ್ತ ಸಾಗಿತು.